# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1640 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇದುವರೆಗೂ ಪೂರ್ಣಗೊಂಡಿರುವ ಪೋಡಿ ಮುಕ್ತ ಗ್ರಾಮಗಳ ಸಂಖ್ಯೆ ಎಷ್ಟು; | ಸೆಪ್ಟೆಂಬರ್-2022ರ ಅಂತ್ಯದವರೆಗೆ ಪೋಡಿ ಮುಕ್ತ ಗ್ರಾಮ ಅಭಿಯಾನದಡಿ ಒಟ್ಟು **16,630** ಗ್ರಾಮಗಳನ್ನು ಅಳತೆಗೆ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲಾಗಿದೆ.<br>ನವೆಂಬರ್-2022ರಿಂದ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ತಂತ್ರಾಂಶದಲ್ಲಿ ಅಳವಡಿಸಿಕೊಂಡು ಫೆಬ್ರವರಿ-2026 ರ ಅಂತ್ಯಕ್ಕೆ **ಒಟ್ಟು 3,230** ಗ್ರಾಮಗಳನ್ನು ಪೂರ್ಣಗೊಳಿಸಲಾಗಿದೆ. |
| ಆ) | ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಲಾಗಿದೆ; ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು; | ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಲಾಗಿರುವ ಮತ್ತು ಬಾಕಿಯಿರುವ ವಿವರ ಈ ಕೆಳಕಂಡಂತಿದೆ:- |

| ಜಿಲ್ಲೆ | **ಅಳತೆ ಪೂರ್ಣಗೊಂಡ** ಗ್ರಾಮಗಳು | **ಬಾಕಿ ಗ್ರಾಮಗಳು** |
|---|---|---|
| ತುಮಕೂರು | 1913 | 824 |
| ಚಿತ್ರದುರ್ಗ | 818 | 249 |
| ದಾವಣಗೆರೆ | 849 | 10 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಬಾಕಿಯಿರುವ ಗ್ರಾಮಗಳಲ್ಲಿ ರೈತರು ಅರ್ಜಿ ಸಲ್ಲಿಸಿದ್ದರೂ ಸಹ ಪೋಡಿ ಕಾರ್ಯಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು; | ಪೋಡಿ ಮುಕ್ತ ಗ್ರಾಮ ಯೋಜನೆಯಲ್ಲಿ ಪೋಡಿಗಾಗಿ ರೈತರು ಯಾವುದೇ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ಇಲಾಖೆಯಿಂದ ಸ್ವಯಂ ಪ್ರೇರಿತವಾಗಿ ಬಹುಮಾಲೀಕತ್ವದ ಪಹಣಿಗಳಿರುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಪೋಡಿ ಮಾಡಲಾಗುತ್ತಿದೆ.<br>ಪೋಡಿ ಮುಕ್ತ ಗ್ರಾಮ ಯೋಜನೆಗೆ ಆಯ್ಕೆಯಾಗದೆ ಇರುವ ಗ್ರಾಮಗಳಲ್ಲಿ ರೈತರಿಂದ ಯಾವುದೇ ಸೇವೆಗೆ ಅರ್ಜಿ ಸ್ವೀಕೃತವಾದಲ್ಲಿ ನಿಯಮಾನುಸಾರ ಅಳತೆ ಕಾರ್ಯ ಕೈಗೊಳ್ಳಲಾಗುತ್ತದೆ. |
| ಈ) | ಈ ಜಿಲ್ಲೆಗಳಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಸಮಯ ನಿಗಧಿಪಡಿಸಲಾಗಿದೆಯೇ; ನಿಗಧಿತ ಸಮಯದಲ್ಲಿ ಪೋಡಿ ಕಾರ್ಯವನ್ನು | ಪೋಡಿ ಮುಕ್ತ ಗ್ರಾಮ ಯೋಜನೆಯಲ್ಲಿ ಈ ಜಿಲ್ಲೆಗಳಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಯಾವುದೇ ಸಮಯ (ಕಾಲಮಿತಿ) ನಿಗದಿಪಡಿಸಲಾಗಿರುವುದಿಲ್ಲ.<br>ಪ್ರಥಮ ಆದ್ಯತೆಯಾಗಿ ಸಾರ್ವಜನಿಕರು ಶುಲ್ಕ ಪಾವತಿಸಿ ಸಲ್ಲಿಸುವ 11ಇ, ತತ್ಕಾಲ್ ಪೋಡಿ, ಹದ್ದುಬಸ್ತು, ಇ ಸ್ವತ್ತು ಹಾಗೂ ದರಖಾಸ್ತು ಪೋಡಿ ಪ್ರಕರಣಗಳು, ಭೂಸುಧಾರಣ ಪೋಡಿ ಪ್ರಕರಣಗಳು, ಭೂ ಪರಿವರ್ತನಾ ಪೋಡಿ |

| | | |
|---|---|---|
| | ಪೂರ್ಣಗೊಳಿಸದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು? | ಪ್ರಕರಣಗಳು, ನ್ಯಾಯಾಲಯದ ಪ್ರಕರಣಗಳು, ಕೆರೆ, ಅರಣ್ಯ ಇತ್ಯಾದಿ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಲಾಗುತ್ತಿದೆ.<br>ಸದರಿ ಪ್ರಕರಣಗಳು ಹೆಚ್ಚಿಗೆ ಇಲ್ಲದಿದ್ದಲ್ಲಿ, ಆದ್ಯತೆ ಮೇರೆಗೆ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಗ್ರಾಮಗಳನ್ನು, ಸರ್ವೆ ನಂಬರಗಳನ್ನು ಹಂತ ಹಂತವಾಗಿ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. |

**ಸಂಖ್ಯೆ:** ಕಂಇ 57 ಎಸ್‌ಎಸ್‌ಸಿ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು